ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಎತ್ತಿನಹೊಳೆ ನೀರಾವರಿ ಕಾಮಗಾರಿ ಕುರಿತು

ಡಾ|| ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು ) :-

739 (1017) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಎತ್ತಿನಹೊಳೆ ನೀರಾವರಿ ಕಾಮಗಾರಿಯು ಯಾವ ಹಂತದಲ್ಲಿದೆ ; ಮತ್ತು ಯಾವ ದಿನಾಂಕದಿಂದ ಪ್ರಾರಂಭವಾಗಿದೆ ; ಇಲ್ಲಿಯವರೆವಿಗೆ ಆದ ಪ್ರಗತಿ ಏನು ;

(ಆ) ಕಳೆದ 03 ವರ್ಷಗಳಿಂದ ಈ ಯೋಜನೆಗೆ ಬಿಡುಗಡೆಯಾದ ಹಣವೆಷ್ಟು; ಹೀಗೆ ಬಿಡುಗಡೆಯಾದ ಹಣದಲ್ಲಿ ವ್ಯಯ ಮಾಡಿರುವ ಹಣವೆಷ್ಟು ; ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಖರ್ಚು ಮಾಡಿದೆ ; (ಸಂಪೂರ್ಣ ಮಾಹಿತಿ ನೀಡುವುದು) ಕಾಮಗಾರಿ ಪ್ರಾರಂಭದಲ್ಲಿ ಮಂಜೂರಾದ ಹಣವೆಷ್ಟು ; ಕಾಮಗಾರಿ ಪೂರ್ಣವಾಗಲು ಎಷ್ಟು ಹಣ ಖರ್ಚು ಆಗುತ್ತದೆ ;

(ಇ) ಈ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳೇನು ಮತ್ತು ಈ ಕಾಮಗಾರಿಯಿಂದ ನಿಗದಿತ ಗುರಿ ಹಾಗೂ ನಿಗದಿತ ಹಣವು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಯೋಜನೆಗೆ ವಿರುದ್ಧವಾಗಿ ಎಷ್ಟು ದಾವೆಗಳಿವೆ ; ಯಾವ ಯಾವ ಕಾರಣಗಳಿಗೆ ದಾವೆಯನ್ನು ಹೂಡಲಾಗಿದೆ ; ಇತ್ಯರ್ಥವಾದ ಹಾಗೂ ಪ್ರಸ್ತುತ ಇರುವ ದಾವೆಗಳ ಸಂಖ್ಯೆ ಎಷ್ಟು ?